**ದಿ: 12-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಶ್ರೀ ಎಸ್.ಜಿ ಕೆ ವಕೀಲರಿಂದ:**

1. ನನಗೆ ಕನ್ನಡ ಭಾಷೆ ಬರುವುದಿಲ್ಲ. ನಿ ಸಿ -4 ಮತ್ತು 6 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ನಿ ಸಿ 4 ಮತ್ತು 6 ರ ದಾಖಲಾತಿಗಳಲ್ಲಿ ನನ್ನ ಸಹಿಗಳು ಇರುವುದಿಲ್ಲ. ನಿ ಸಿ 5 ರ ದಾಖಲಾತಿಯನ್ನು ನಾನು ಬರೆದುಕೊಟ್ಟಿರುವುದಿಲ್ಲ. ನಿ ಸಿ 5 ರ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ಸಾಕ್ಷಿ ಮುಂದುವರಿದು ಶಾಲಂನಾಯಕ ಇವರನ್ನು ತಪಾಸಣೆ ಮಾಡಲು ನಾನು ರೆಫರ ಮಾಡಿರುತ್ತೇನೆ. ದಿನಾಂಕ: 29-05-2025 ರಂದು ಶಾಲಂನಾಯಕ ರವರ ಮೆಂಟಲ್ ಸ್ಟಾಟಿಕ್ಸ್ ಎಕ್ಸಾಮಿನೇಶನ್ ಮಾಡಲು ಮನೋತಜ್ಞೆರಿಗೆ ರೆಫರ್ ಮಾಡಿರುತ್ತೇನೆ. ನಿ ಸಿ 5 ರ ವರದಿಯಲ್ಲಿ ಮನೋತಜ್ಞೆರಿಗೆ ನಾನು ರೆಫರ್ ಮಾಡಿರುವ ಬಗ್ಗೆ ನಮೂದು ಇರುವುದಿಲ್ಲ. ನಾನು ರೆಫರ್ ಮಾಡಿದ ದಿನಾಂಕವನ್ನು ನಿ ಸಿ 5 ರಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ಶಾಲಂನಾಯಕ ಇವರನ್ನು ಪರಿಕ್ಷೆ ಮಾಡಲು ನ್ಯಾಯಾಲಯದಿಂದ ನನಗೆ ಆದೇಶ ಮಾಡಿರುವುದಿಲ್ಲ. ಶಾಲಂನಾಯಕ ಇವರನ್ನು ಪರೀಕ್ಷೆ ಮಾಡಲು ನಿಮಗೆ ಯಾರು ಮತ್ತು ಯಾವ ದಿನಾಂಕದಂದು ರೆಫರ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಾಯಚೂರು ರೀಮ್ಸ್ ಆಸ್ಪತ್ರೆಯ ಡಾ: ರಮೇಶ ಬಾಬು ಮನೋತಜ್ಞೆರು ಹೆಚ್ ಓ ಡಿ ಇವರು ಎರಡು ದಿನದ ಕ್ಯಾಂಪ್ ದಿನಾಂಕ: 29-05-2025 ಮತ್ತು 30-05-2025 ರಂದು ನನಗೆ ರೆಫರ್ ಮಾಡಿರುತ್ತಾರೆ. ಸಾಕ್ಷಿ ಮುಂದುವರಿದು ದಿನಾಂಕ: 29-05-2025 ರಂದು ಡಾ:ರಮೇಶ ಬಾಬುರವರು ಶಾಲಂನಾಯಕರವರನ್ನು ನನಗೆ ರೆಫರ್ ಮಾಡಿರುತ್ತಾರೆ. ನಾನು ರಾಯಚೂರು ರೀಮ್ಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುವುದಿಲ್ಲ ಎಂದರೆ ಸರಿ.

3. ಮೆಡಿಕಲ್ ಬೋರ್ಡ್ 4 ಸದಸ್ಯರನ್ನು ಹೊಂದಿರುತ್ತದೆ ಎಂದರೆ ಸರಿ. ಮೆಡಿಲ್ ಬೋರ್ಡ್ ನ ಸದಸ್ಯರಲ್ಲಿ ಮೊದಲನೇಯದಾಗಿ ಡಿಪಾರ್ಟ್‌ಮೆಂಟ್ ಆಫ್ ಜನರಲ್ ಫಿಜಿಶಿಯನ್ , ಎರಡನೇಯದಾಗಿ ಮನೋತಜ್ಞೆರು, ಮೂರನೇಯದಾಗಿ ಜಿಲ್ಲಾ ಶಸ್ತ್ರ ಚಿಕಿತ್ಸಕರು, ನಾಲ್ಕನೇಯದಾಗಿ ಡಿಸ್ಟಿಕ್ ಮೆಡಿಕಲ್

ಸೂಪಡೆಂಟ್ ರವರು ಆಗಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ನ್ಯಾಯಾಲಯದ ಕಡತಗಳನ್ನು ಪರಿಶೀಲಿಸಿರುವುದಿಲ್ಲ. ನ್ಯಾಯಾಲಯದಿಂದ ನನಗೆ ಸಾಕ್ಷಿ ನುಡಿಯಲು ಸಮನ್ಸ್ ಬಂದಿರುತ್ತದೆ. ರಾಯಚೂರು ರೀಮ್ಸ್ ಆಸ್ಪತ್ರೆಯ ವೈದ್ಯರು ನನಗೆ ನ್ಯಾಯಾಲಯದ ಆದೇಶದ ಬಗ್ಗೆ ದಾಖಲೆ ತೋರಿಸಿರುವುದಿಲ್ಲ. ದಿನಾಂಕ: 21-03-2025 ರಂದು ನ್ಯಾಯಾಲಯದಿಂದ ಸಲ್ಲಿಸಿರುವ ಪತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಪತ್ರದಲ್ಲಿ ಶಾಲಂನಾಯಕ ಎನ್ನುವವರನ್ನು ಪುನ: ಪರೀಕ್ಷೆ ಮಾಡಿ ಮೆಡಿಕಲ್ ಸರ್ಟಿಫಿಕೇಟ್ ಮತ್ತು ಟೆಸ್ಟ್ ರಿಪೋರ್ಟ್ ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ ವರದಿ ಸಲ್ಲಿಸಲು ಸೂಚಿಸಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನ್ಯಾಯಾಲಯಕ್ಕೆ ನಾನು ಮೆಡಿಕಲ್ ಬೋರ್ಡ್ ಸರ್ಟಿಪಿಕೇಟ್ ನ್ನು ಸಲ್ಲಿಸಿರುವುದಿಲ್ಲ.

4. ನಿ ಸಿ -2 ರ ಪ್ರಕಾರ ನಾನು ಶಾಲಂನಾಯಕ ರವರನ್ನು Developmental screening test ಮತ್ತು vineland social maturity scale ಪರೀಕ್ಷೆಗೆ ಒಳಪಡಿಸಿರುತ್ತೇನೆಂದರೆ ಸರಿ. ಸದರಿ ಪರೀಕ್ಷೆಗೆ ಒಳಪಡಿಸಲು ಯಾವ ವಿಧಾನವನ್ನು ಅನುಸರಿಸಿದ್ದಿರಿ ಮತ್ತು ಶಾಲಂನಾಯಕ ರವರಿಗೆ ಯಾವ ಪ್ರಶ್ನಾವಳಿಗಳನ್ನು ಕೇಳಿದ್ದೀರಿ ಮತ್ತು ಅದಕ್ಕೆ ಅವರು ಯಾವ ಉತ್ತರವನ್ನು ಕೊಟ್ಟಿದ್ದಾರೆ ಎಂದು ವಿವರವಾಗಿ ನಿ ಸಿ 2 ರಲ್ಲಿ ವರದಿ ನಮೂದು ಮಾಡಿರುವುದಿಲ್ಲ. ನಿ ಸಿ 2 ರಲ್ಲಿ ಶಾಲಂನಾಯಕ ಇವರನ್ನು ಯಾವ ಭಾಷೆಯಲ್ಲಿ ನೀವು ವಿಚಾರಣೆಯನ್ನು ಮಾಡಿದ್ದಿರಿ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ನಮೂದು ಮಾಡಿರುವುದಿಲ್ಲ ಆದರೆ ನಾನು ಅವರನ್ನು ಹಿಂದಿ ಭಾಷೆಯಲ್ಲಿ ವಿಚಾರಣೆ ಮಾಡಿರುತ್ತೆನೆ ಎನ್ನುತ್ತಾರೆ. ನಿ ಸಿ 2 ವರದಿಯಲ್ಲಿ ನೀವು ಕಾರಣಗಳನ್ನು ಮತ್ತು ಯಾವ ಅಂಶಗಳನ್ನು ಆಧಾರಿಸಿ ನೀಡಿದ್ದೀರಿ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ಬೇರೆ ಮನೋತಜ್ಞರು ನೋಡಿದರೆ ಅವರಿಗೆ ಅರ್ಥ ಆಗುತ್ತದೆ ಎನ್ನುತ್ತಾರೆ. ಒಬ್ಬ ಲೇ ಮ್ಯಾನ್ ನಿಮ್ಮ ವರದಿಯನ್ನು ಓದಿದರೆ ಅವರಿಗೆ ವರದಿಯ ಅಂಶಗಳು ಅರ್ಥವಾಗುವುದಿಲ್ಲ ಎಂದರೆ ಸರಿ.

5. vineland social maturity scale ಪರೀಕ್ಷೆಗೆ ಯಾವ ವಿಧಾಗಳನ್ನು ಅಥವಾ ಯಾವ ವಿಷಯಗಳ ಬಗ್ಗೆ ಶಾಲಂನಾಯಕ ಅವರಿಗೆ ಪ್ರಶ್ನೆಗಳನ್ನು ಕೇಳಿದ್ದಿರಾ ಎಂದರೆ ಸಾಕ್ಷಿಯು ಅವರ ಸೋಶಿಯಲ್ ಮೆಚೂರಿಟಿ ಮತ್ತು ಇಂಟಲಿಜೆನ್ಸ್ ಬಗ್ಗೆ ಕೇಳಿರುತ್ತೇನೆ ಎನ್ನುತ್ತಾರೆ. ಅವರ ಸೋಶಿಯಲ್ ಮೆಚೂರಿಟಿ ಬಗ್ಗೆ ಯಾವ ಪ್ರಶ್ನೆಗಳನ್ನು ಕೇಳಿರುತ್ತಿರಿ ಮತ್ತು ಅವರು ಯಾವ ಉತ್ತರವನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಹೇಳಬಹುದು ಎನ್ನುತ್ತಾರೆ. ನಿ ಸಿ 2 ರ ಜೊತೆಗೆ ನಾನು ಸದರಿ ಪ್ರಶ್ನಾವಳಿ ಮತ್ತು ಉತ್ತರದ ದಾಖಲೆಯನ್ನು ನೀಡಿರುವುದಿಲ್ಲ ಆದರೆ ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ ಎನ್ನುತ್ತಾರೆ. vineland social maturity scale ಪರೀಕ್ಷೆ ಬಗ್ಗೆ 8 ವಿಷಯಗಳ ಬಗ್ಗೆ ಪ್ರಶ್ನೆ ಕೇಳಬೇಕಾಗುತ್ತದೆ ಎಂದರೆ ಸರಿ. ಮೆಡಿಕಲ್ ಜ್ಯೂರಿಸಿಪೆಡೆನ್ಸ್ vineland social maturity scale ಪರೀಕ್ಷೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. vineland social maturity scale ಪರೀಕ್ಷೆ ವಿಧಾನದಲ್ಲಿ ಐ ಕ್ಯೂ ನಿರ್ದಾರ ಮಾಡಲು ಮತ್ತು ಡೆವಲಪಮೆಂಟ್ ಸ್ಕ್ರಿನಿಂಗ್ ಟೆಸ್ಟ್ ವಿಧಾನದಲ್ಲಿ ಐ ಕ್ಯೂ ನಿರ್ದಾರ ಮಾಡಲು ಬೇರೆ ಮಾಪನ ಇರುತ್ತದೆ ಎಂದರೆ ಸರಿ. ನಿ ಸಿ 2 ರಲ್ಲಿ ನೀವು ಇನಡ್ಯೂಸಲ್ ಟೆಸ್ಟ್ ರಿಪೋರ್ಟ್ ನ್ನು ನೀವು ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಕಾಂಪ್ರಿನ್ಸಿವರ್ ರಿಪೋರ್ಟ್ ನ್ನು ಸಲ್ಲಿಸಿರುತ್ತೇನೆ ಪ್ರತ್ಯೇಕವಾಗಿ ಕೊಟ್ಟಿರುವುದಿಲ್ಲ ಎನ್ನುತ್ತಾರೆ. ನಿ ಸಿ 2 ವರದಿಯಲ್ಲಿ ಶಾಲಂನಾಯಕ ರವರಿಗೆ ನ್ಯಾಯಾಲಯದಲ್ಲಿ ದಾವಾ ನಡೆಸಲು ಯೋಗ್ಯತೆ ಇರುವುದಿಲ್ಲ ಎಂದು ನೀವು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಕೀಲರು ಹೇಳಿದ ಎಲ್ಲಾ ವಿವರಗಳನ್ನು ನಾವು ವರದಿಯಲ್ಲಿ ತೋರಿಸಲು ಬರುವುದಿಲ್ಲ ಎನ್ನುತ್ತಾರೆ. ದಿನಾಂಕ: 05-06-2025 ರಂದು ಶಾಲಂನಾಯಕರವರು ನನ್ನ ಜೊತೆಯಲ್ಲಿ ಇರಲಿಲ್ಲ. ದಿನಾಂಕ: 29-07-2025 ರಂದು ನಾನು ಶಾಲಂನಾಯಕರವರನ್ನು ಪರೀಕ್ಷೆಗೆ ಒಳಪಡಿಸಿರುವುದಿಲ್ಲ. ರಾಯಚುರು ರೀಮ್ಸ್ ಆಸ್ಪತ್ರೆಯಲ್ಲಿ ಶಾಲಂನಾಯಕ ಇವರಿಗೆ ಸಂಬಂಧಪಟ್ಟ ಕೇಸ್ ಶೀಟ್ ನಲ್ಲಿ ನಾನು ಸಹಿ ಮಾಡಿರುವುದಿಲ್ಲ. ರಾಯಚೂರು ರೀಮ್ಸ್

ಆಸ್ಪತ್ರೆಯಲ್ಲಿ ಯಾವುದೇ ರಜಿಸ್ಟರ್ ಗೆ ನಾನು ಸಹಿ ಮಾಡಿರುವುದಿಲ್ಲ ಸಾಕ್ಷಿ ಮುಂದುವರಿದು ನನಗೆ ನೆನಪಿರುವುದಿಲ್ಲ.

6. ರಾಯಚುರು ರೀಮ್ಸ್ ಆಸ್ಪತ್ರೆಯು ಸರಕಾರಿ ಆಸ್ಪತ್ರೆಯಾಗಿರುತ್ತದೆ ಎಂದರೆ ಸರಿ. ಯಾವುದೇ ರೋಗಿಯನ್ನು ತಪಾಸಣೆಗೆ ಒಳಪಡಿಸಬೇಕಾದರೆ ಅವರನ್ನು ಒಳರೋಗಿಯಾಗಿ ಅಥವಾ ಹೊರರೋಗಿಯಾಗಿ ಆಸ್ಪತ್ರೆಯಲ್ಲಿ ದಾಖಲಿಸಬೇಕಾಗುತ್ತದೆ ಎಂದರೆ ಸರಿ. ಹೊರರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಸಂಬಂಧ ಪಟ್ಟ ಕೇಸ್ ಶೀಟ್ ನ್ನು ಬರೆಯುತ್ತಾರೆ ಎಂದರೆ ಸರಿ. ಸಂಬಂಧಪಟ್ಟ ಕೇಸ್ ಶೀಟ್ ನಲ್ಲಿ ವಿವರಗಳನ್ನು ಬರೆಯಬೇಕಾಗುತ್ತದೆ ಎಂದರೆ ಸರಿ. ಕೇಸ್ ಶೀಟ್ ನಲ್ಲಿ ಯಾವ ವೈದ್ಯರು ಪರೀಕ್ಷೆ ಮಾಡಿದ್ದಾರೆ ಎಂದು ಅವರ ಹೆಸರು ಮತ್ತು ವಿವರ ಇರುತ್ತದೆ ಎಂದರೆ ಸರಿ. ನೀವು ರಾಯಚೂರು ರೀಮ್ಸ್ ಆಸ್ಪತ್ರೆಗೆ ಭೇಟಿಯಾಗದೇ ಮತ್ತು ಶಾಲಂ ನಾಯಕ ಎನ್ನುವವರನ್ನು ಪರೀಕ್ಷೆ ಮಾಡದೇ ನಿಮ್ಮ ಸಿಕಂದರಾಬಾದ್ ಆಸ್ಪತ್ರೆಯಲ್ಲಿ ಕುಳಿತು ವಾದಿಯರ ಕೋರಿಕೆಯ ಮೇರೆಗೆ ವರದಿಯನ್ನು ಬರೆದು ಸಲ್ಲಿಸಿದ್ದಿರಿ ಎಂದರೆ ಸಾಕ್ಷಿಯು ಇಲ್ಲ ನಾನು ರಾಯಚೂರು ರೀಮ್ಸ್ ಆಸ್ಪತ್ರೆಗೆ 29-05-2025 ರಂದು 30-05-2025 ರಂದು ಭೇಟಿಯಾಗಿರುತ್ತೇನೆ ಎನ್ನುತ್ತಾರೆ. ನೀವು ವರದಿಯಲ್ಲಿ ಸಲ್ಲಿಸಿರುವ ವಿವರಗಳು ವಸ್ತುಸ್ಥಿತಿಗೆ ವಿರುದ್ದವಾಗಿರುತ್ತವೆ ಎಂದರೆ ಸರಿಯಲ್ಲ. ನಿ ಸಿ 2 ರಲ್ಲಿ ಶಾಲಂನಾಯಕ ಇವರ ಬೌದ್ದಿಕ ವಯಸ್ಸು 11 ವರ್ಷ 8 ತಿಂಗಳು ಮತ್ತು ಅವರ ಐ ಕ್ಯೂ 77 ಇರುತ್ತದೆ ಮತ್ತು ಅವರ ಇಂಟಲೆಕ್ಷಲ್ ಇಂಪಿರಿಮೆಂಟ್ ಪರ್ಸೆಂಟೇಜ್ 25% ಮತ್ತು ಬಾರ್ಡ್ ಲೈನ್ ಇಂಟಲೆಜಿನ್ಸ್ ಎಂದು ಸುಳ್ಳು ಇಂಪ್ರೇಶನ್ ಮತ್ತು ನ್ಯಾಯಾಲಯದಲ್ಲಿ ದಾವಾ ನಡೆಸಲು ಅವರಿಗೆ ಯೋಗ್ಯತೆ ಇರುವುದಿಲ್ಲ ಎಂದು ಸುಳ್ಳು ಮಾಹಿತಿ ಬರೆದಿದ್ದೀರಿ ಎಂದರೆ ಸರಿಯಲ್ಲ. ನೀವು ವಾದಿಯರಿಗೆ ಸಹಾಯ ಮಾಡಲು ಅವರ ಕೋರಿಕೆಯ ಮೇರೆಗೆ ಸುಳ್ಳು ಸರ್ಟಿಫಿಕೇಟ್ ನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ವಾಟೀಸವಾಲು: ವಾದಿ ಪರ ಶ್ರೀ ಕೆ ಎಸ್ ಆರ್ ಕೆ ವಕೀಲರಿಂದ :-**

7. ನನಗೆ ಹಿಂದಿ ಭಾಷೆ ಬರುತ್ತದೆ. ನಾನು ಶಾಲಂನಾಯಕರವರನ್ನು ಹಿಂದಿ ಭಾಷೆಯಲ್ಲಿ ಸಂಭಾಷಣೆ ಮಾಡಿ ಅವರ ತಪಾಸಣೆ ಮಾಡಿರುತ್ತೇನೆ. ಮನೋರೋಗ ವೈದ್ಯರು ರವರ ವಿಶೇಷತೆ ಮತ್ತು ನಿಮ್ಮ ವಿಶೇಷತೆ ಬೇರೆಯಾಗಿರುತ್ತದೆ ಎಂದರೆ ಸರಿ. ಮನೋರೋಗ ವೈದ್ಯರು ಮನೋರೋಗಿಯನ್ನು ತಪಾಸಣೆ ಮಾಡಿ ಅವರಿಗೆ ಔಷಧವನ್ನು ಕೊಡುತ್ತಾರೆ ಆದರೆ ನಾನು ಮನೋರೋಗಿ ಗಳಿಗೆ ರಿಯಾಬಿಟೇಶನ್ ಸೈಕಾಲಾಜಿಸ್ಟ್ ತಜ್ಞನಾಗಿರುತ್ತೇನೆ. ನಿ ಸಿ 2 ರಲ್ಲಿ ನಮೂದು ಮಾಡಿರುವ ಟೆಸ್ಟ್ ಗಳನ್ನು ಮಾಡಲು ನಾನು ತಜ್ಞನಾಗಿರುತ್ತೇನೆ ಎಂದರೆ ಸರಿ. ಶಾಲಂನಾಯಕರವರನ್ನು ತಪಾಸಣೆ ಮಾಡಲು ರೀಮ್ಸ್ ಆಸ್ಪತ್ರೆಯಿಂದ ನಮ್ಮ ಸಂಸ್ಥೆಯಾದ ಎನ್ ಐ ಈ ಪಿ ಐ ಡಿ ಗೆ ಆದ ಪತ್ರವ್ಯವಹಾರಗಳನ್ನು ನಾನು ಹಾಜರುಪಡಿಸಬಹುದು. ಮೆಡಿಕಲ್ ಬೋರ್ಡ್ ನ ನಾಲ್ಕು ಜನ ಸದಸ್ಯರಲ್ಲಿ ಮನೋರೋಗಿ ತಜ್ಞ ರಾಗಿ ನಿಮ್ಮ ವಿಶೇಷತೆ ಹೊಂದಿರುವವರು ಇವರಲ್ಲಿ ಯಾರು ಇರುವುದಿಲ್ಲ ಎಂದರೆ ಸರಿ. ನಿ ಸಿ 2 ರಲ್ಲಿ ಕ್ರಮ ಸಂಖ್ಯೆ 1 ಮತ್ತು 2 ರ ಪರೀಕ್ಷೆ ಮಾಡಿದಾಗ ಸದರಿ ವ್ಯಕ್ತಿಯ ಮನೋಸ್ಥಿತಿಯ ಬಗ್ಗೆ ತೀರ್ಮಾನ ಮಾಡಬಹುದಾಗಿರುತ್ತದೆ ಎಂದರೆ ಸರಿ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ